| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 54 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 24

Total No. of Questions : 54 ] [ Total No. of Printed Pages : 24

**ಸಂಕೇತ ಸಂಖ್ಯೆ : 33-K** **ವಿಷಯ : ದ್ವಿತೀಯ ಭಾಷೆ — ಕನ್ನಡ**

**Code No. : 33-K** **Subject : Second Language — KANNADA**

ದಿನಾಂಕ : 09. 04. 2014 ] [ Date : 09. 04. 2014

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-15 ರವರೆಗೆ ] [ Time : 9-30 A.M. to 12-15 P.M

ಪರಮಾವಧಿ ಅಂಕಗಳು : 100 ] [ Max. Marks : 100

**FOR OFFICE USE ONLY**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 12. | | 23. | | 34. | | 45. | |
| 2. | | 13. | | 24. | | 35. | | 46. | |
| 3. | | 14. | | 25. | | 36. | | 47. | |
| 4. | | 15. | | 26. | | 37. | | 48. | |
| 5. | | 16. | | 27. | | 38. | | 49. | |
| 6. | | 17. | | 28. | | 39. | | 50. | |
| 7. | | 18. | | 29. | | 40. | | 51. | |
| 8. | | 19. | | 30. | | 41. | | 52. | |
| 9. | | 20. | | 31. | | 42. | | 53. | |
| 10. | | 21. | | 32. | | 43. | | 54. | |
| 11. | | 22. | | 33. | | 44. | | × | |
| ***Total Marks*** | | | | | | | | | |

| **Total Marks in words** | | **Grand Total** | |
|---|---|---|---|

| | | | |
|---|---|---|---|
| 1. ✓ | | ✓ | ✓ |
| 2. ✓ | | | |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರುಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 54 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ (ಸೀಸದ ಕಡ್ಡಿ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು-ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಿ, ಅರ್ಥೈಸಿಕೊಳ್ಳಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ :

$15 \times 1 = 15$

1. ಈ ಪದವು ಗುಂಪಿಗೆ ಸೇರುವುದಿಲ್ಲ

(ಎ) ದೆವ್ವ (ಬಿ) ಆತ್ಮ

(ಸಿ) ಭೂತ (ಡಿ) ಪ್ರೇತ

*ಉತ್ತರ :* ______________________

2. 'ಗಡಗಡ' — ಇದು ಯಾವ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ ?

(ಎ) ಅನುಕರಣಾವ್ಯಯ ಪದ (ಬಿ) ಕ್ರಿಯಾಪದ

(ಸಿ) ಜೋಡಿಪದ (ಡಿ) ದ್ವಿರುಕ್ತಿ ಪದ

*ಉತ್ತರ :* ______________________

3. 'ತಿರುಪಥಿ' — ಈ ಪದದ ಕಾಗುಣಿತ ಶುದ್ಧರೂಪ

(ಎ) ಥಿರುಪಥಿ (ಬಿ) ತಿರುಪತಿ

(ಸಿ) ಥಿರುಪತಿ (ಡಿ) ತೀರುಪತಿ

ಉತ್ತರ : ______________________

4. 'ವಿಫಲತೆ' — ಈ ಪದದ ವಿರುದ್ಧಾರ್ಥಕ ರೂಪ

(ಎ) ಫಲತೆ (ಬಿ) ಅಫಲತೆ

(ಸಿ) ಸಫಲತೆ (ಡಿ) ಅವಿಫಲತೆ

ಉತ್ತರ : ______________________

5. 'ಕವಿ' — ಈ ಪದದ ಅನ್ಯಲಿಂಗ ರೂಪ

(ಎ) ಕವಿನಿ (ಬಿ) ಕವಿತ

(ಸಿ) ಕವಯಿತ್ರಿ (ಡಿ) ಕವನ

ಉತ್ತರ : ______________________

6. 'ಸಿಂಹ' — ಈ ಪದದ ತದ್ಭವ ರೂಪ

(ಎ) ಸಿಂಘ (ಬಿ) ಸಿಂಅ

(ಸಿ) ಸಿಂಮ (ಡಿ) ಸಿಂಗ

ಉತ್ತರ : ______________________

7. ಒಂದು ಹೊತ್ತು, ಕವಳ ಇಲ್ದೆ ಹೋಯ್ತು ! — ಈ ವಾಕ್ಯದ ಕೊನೆಯಲ್ಲಿ ಬಳಕೆಯಾಗಿರುವ ಲೇಖನ ಚಿಹ್ನೆ ಯಾವುದು ?

(ಎ) ಪೂರ್ಣವಿರಾಮ (ಬಿ) ಆಶ್ಚರ್ಯಸೂಚಕ

(ಸಿ) ಉದ್ಧರಣ (ಡಿ) ಪ್ರಶ್ನಾರ್ಥಕ

ಉತ್ತರ : ______________________

8. ‘ಕೂಸುಕುನ್ನಿ’ — ಇದು ಯಾವ ವ್ಯಾಕರಣಾಂಶಕ್ಕೆ ಸೇರಿದೆ ?

(ಎ) ಸಮಾಸಪದ (ಬಿ) ಜೋಡಿಪದ

(ಸಿ) ಧಾತುಪದ (ಡಿ) ಸಂಧಿ ಪದ

*ಉತ್ತರ :* ____________________

9. ‘ಮಾಡು’ — ಈ ಪದದ ನಿಷೇದಾರ್ಥಕ ರೂಪವಿದು

(ಎ) ಮಾಡಲಿ (ಬಿ) ಮಾಡುವನು

(ಸಿ) ಮಾಡ್ಯಾನು (ಡಿ) ಮಾಡನು

*ಉತ್ತರ :* ____________________

10. ‘ಅಣ್ಣ’ — ಈ ಪದದ ಬಹುವಚನ ರೂಪ

(ಎ) ಅಣ್ಣರು (ಬಿ) ಅಣ್ಣಂದಿರು

(ಸಿ) ಅಣ್ಣಗಳು (ಡಿ) ಅಣ್ಣಂದಿರುಗಳು

*ಉತ್ತರ :* ____________________

11. ‘ನಿಂತಾವು’ — ಈ ಪದದ ಗ್ರಾಂಥಿಕ ರೂಪ

(ಎ) ನಿಂತವು (ಬಿ) ನಿಂತಾವಾ

(ಸಿ) ನಿಂತಿವೆ (ಡಿ) ನಿಲ್ಲಿಸಿವೆ

*ಉತ್ತರ :* ____________________

12. ‘ತಾಯಿ ಹಗ್ಗದ ಸುತ್ತನ್ನು ಬಿಡಿಸಿದಳು.’ — ಈ ವಾಕ್ಯದಲ್ಲಿರುವ ಕ್ರಿಯಾಪದ ಯಾವುದು ?

(ಎ) ತಾಯಿ (ಬಿ) ಹಗ್ಗದ

(ಸಿ) ಸುತ್ತನ್ನು (ಡಿ) ಬಿಡಿಸಿದಳು

*ಉತ್ತರ :* ____________________

13. ರೆಪರ್ಟರಿ ಕಟ್ಟುವುದು ಅವರ ಉದ್ದೇಶವಾಗಿತ್ತು — ಈ ವಾಕ್ಯದಲ್ಲಿ ಬಳಕೆಯಾಗಿರುವ ಸರ್ವನಾಮ ಪದ ಯಾವುದು ?

(ಎ) ರೆಪರ್ಟರಿ (ಬಿ) ಕಟ್ಟುವುದು

(ಸಿ) ಅವರ (ಡಿ) ಉದ್ದೇಶ

*ಉತ್ತರ :* ____________________

14. ಪೂರ್ವ — ಈ ಪದದ ಸಮಾನಾರ್ಥಕ ರೂಪ

(ಎ) ಪಡುವಣ (ಬಿ) ಬಡಗಣ

(ಸಿ) ತೆಂಕಣ (ಡಿ) ಮೂಡಣ

*ಉತ್ತರ :* ______

15. ಪದ್ಯರಚನಾ ನಿಯಮಗಳನ್ನು ತಿಳಿಸುವ ಶಾಸ್ತ್ರ

(ಎ) ಸಾಂಗತ್ಯ (ಬಿ) ವ್ಯಾಕರಣ

(ಸಿ) ಛಂದಸ್ಸು (ಡಿ) ಅಲಂಕಾರ

*ಉತ್ತರ :* ______

16. ಈ ಕೆಳಗಿನ 'ಅ' ಪಟ್ಟಿಯಲ್ಲಿರುವ ವ್ಯಾಕರಣಾಂಶಗಳಿಗೆ ಸರಿಹೊಂದುವ ಉದಾಹರಣೆಗಳನ್ನು 'ಬ' ಪಟ್ಟಿಯಿಂದ ಆರಿಸಿ, ಕ್ರಮಾಕ್ಷರದೊಂದಿಗೆ ಉತ್ತರಕ್ಕೆ ಮೀಸಲಿಟ್ಟ ಜಾಗದಲ್ಲಿಯೇ ಬರೆಯಿರಿ : 5 × 1 = 5

| *ಅ ಪಟ್ಟಿ* | *ಬ ಪಟ್ಟಿ* |
|---|---|
| i) ಉಪಮಾಲಂಕಾರ | ಅ) ರಾಜ್ಯೋತ್ಸವ |
| ii) ದ್ವಿತೀಯ ವಿಭಕ್ತಿ | ಆ) ಕ್ಷಣಕ್ಷಣ |
| iii) ಅನ್ಯದೇಶೀಯ ಪದ | ಇ) ಪರಮಾಶ್ಚರ್ಯ |
| iv) ಗುಣ ಸಂಧಿ | ಈ) ನಗುವೇ ಪರದೆ |
| v) ದ್ವಿರುಕ್ತಿ | ಉ) ಹೃಷಿಕೇಶವನ್ನು |
| | ಊ) ಬೆಹನ್‌ಜಿ |
| | ಋ) ಮಳೆ ಖಾಲಿ ಚೆಕ್ಕಿನ ಹಾಳೆಯಿದ್ದಂತೆ |
| | ಎ) ಭಾರತದಲ್ಲಿ |

*ಉತ್ತರಗಳು :* i) ______

ii) ______

iii) ______

iv) ______

v) ______

ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : 5 × 1 = 5

17. ದೇವತೆಯು ಭರತಕುಮಾರನಿಗೆ ..........................................................................ನ್ನು ಕೊಟ್ಟಿತು.

18. ಲಕ್ಷ್ಮಣೆಗೆಯ ಜನ್ಮವೃತ್ತಾಂತವನ್ನು ಹೇಳಿದವರು ..........................................................................

19. ಬಿ.ವಿ. ಕಾರಂತರು .......................................................................... ವಿಶ್ವವಿದ್ಯಾಲಯದಿಂದ ಹಿಂದಿ ಪದವಿಯನ್ನು ಪಡೆದರು.

20. ಗಾಂಧೀಜಿ ಸರ್ವೋದಯದ ..........................................................................

21. ಯುಗಾದಿ ಬಂದರೂ ಯುಗಾದಿ ಹೋದರೂ .......................................................................... ಬಸಿರು ತುಂಬಲಿಲ್ಲ.

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಗಳನ್ನು ಬರೆಯಿರಿ : 8 × 1 = 8

22. ತೆನಾಲಿ ರಾಮಕೃಷ್ಣನು ತನ್ನ ಹೆಂಡತಿಯು ಎಲ್ಲಿಗೆ ಹೋದಳೆಂದು ದೊರೆಯ ಬಳಿ ಹೇಳಿದನು ?

23. ಹಿಟ್ಟಿನ ಮುದ್ದೆಯನ್ನು ಚಪಾತಿ ಆಕಾರಕ್ಕೆ ತರುವ ಕ್ರಿಯೆಗೆ ಏನೆನ್ನುತ್ತಾರೆ ?

24. ಬಿ.ವಿ. ಕಾರಂತರಿಗೆ ಗುಬ್ಬಿ ಕಂಪೆನಿಯಲ್ಲಿ ವಿಶೇಷವಾಗಿ ಯಾವ ಪಾತ್ರ ಸಿಗುತ್ತಿತ್ತು ?

25. ತಗಡೂರು ರಾಮಚಂದ್ರರಾಯರ ಉಡುಪು ಯಾವುದನ್ನು ಪ್ರತಿನಿಧಿಸುತ್ತಿದ್ದಿತು ?

26. ಗಾಂಧೀಜಿಯವರು ಇಳೆಗೆ ಯಾವ ತತ್ತ್ವವನ್ನು ಬೋಧಿಸಿದರು ?

27. ಹೊರೆಯಾಲ ದೊರೆಸ್ವಾಮಿಯವರ ಪ್ರಕಾರ ಹರ್ಷವು ಎಲ್ಲಿ ಅಡಗಿತ್ತು ?

28. 'ದರ್ಶನ' ಪದ್ಯದಲ್ಲಿ ತಿಳಿಸಿರುವಂತೆ ಸರತಿಯಲ್ಲಿ ನಿಂತಿದ್ದಾಗ ಕವಿಗಳನ್ನೇ ನೋಡುತ್ತಿದ್ದವರು ಯಾರು ?

29. ರತ್ನಾಕರವರ್ಣಿಯು ಭರತ ಭೂತಾಳಕ್ಕೆ ಸಿಂಗಾರವಾದದ್ದು ಯಾವುದು ಎಂದಿದ್ದಾರೆ ?

ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $12 \times 2 = 24$

30. ಲಾರಿಯ ಕೆಳಗೆ ಬಿದ್ದ ನಾಣ್ಯವನ್ನು 'ಲೊಟ್ಟ' ತೆಗೆದದ್ದು ಹೇಗೆ ?

31. ಬಾಲ್ಯದಲ್ಲಿ ಕಾರಂತರಿಗೆ ಸಿಕ್ಕ ಕಲಾಶ್ರೀಮಂತಿಕೆ ಯಾವ ಯಾವ ಬಗೆಯವು ?

32. ತಗಡೂರು ರಾಮಚಂದ್ರರಾಯರ ಸಾಂಸಾರಿಕ ಬದುಕನ್ನು ಕುರಿತು ಬರೆಯಿರಿ.

33. ಲಾಲ್‌ಬಾಗಿನ ಹುಟ್ಟು-ಶೈಶವದ ಬಗ್ಗೆ ದೇ.ಜ.ಗೌ. ರವರ ಅಭಿಪ್ರಾಯವೇನು ?

34. ದೇ.ಜ.ಗೌ. ರವರು 'ವೃಕ್ಷಪ್ರೇಮಿ'ಯ ಆಗಮನವನ್ನು ಕುರಿತು ಹೇಳಿರುವ ಮಾತುಗಳಾವುವು ?

35. ಶಾಸ್ತ್ರಿಯವರ ಹೆಂಡತಿಗೆ ತಮ್ಮ ಮೊಮ್ಮಗನ ಸುಖ ಮಸುಕಾಗಿ ಕಾಣಲು ಕಾರಣವೇನು ?

36. ‘ಜೀವನದಿ’ ಪದ್ಯದಲ್ಲಿ ಆಧುನಿಕ ಕವಿಗಳನ್ನು ಪ್ರಕೃತಿಯೊಂದಿಗೆ ಹೇಗೆ ಸಮ್ಮಿಲನಗೊಳಿಸಲಾಗಿದೆ ?

37. ತೀ.ನಂ. ಶ್ರೀಕಂಠಯ್ಯನವರು ಗಾಂಧೀಜಿಯವರನ್ನು ‘ಪವಾಡ ಪುರುಷ’ರೆಂದು ಕರೆಯಲು ಕಾರಣವೇನು ?

38. ಯುಗಾದಿಯ ನಿರೀಕ್ಷೆಯಲ್ಲಿರುವವರ ಸ್ಥಿತಿ ಹೇಗಿದೆ ? ಎಂದು ದೊರೆಸ್ವಾಮಿಯವರು ಹೇಳಿದ್ದಾರೆ.

39. 'ಹಡಗದ ಚಂದ' ಪದ್ಯದಲ್ಲಿ ಹಡಗನ್ನು 'ಸಂಕ್ಷಿಪ್ತ ಬ್ರಹ್ಮಾಂಡ'ವೆಂದು ಏಕೆ ಕರೆಯಲಾಗಿದೆ ?

40. ಕವಿಪುತ್ರನು ಭಾರತಕ್ಕೆ ಹಿಂದಿರುಗಲು ತೀರ್ಮಾನಿಸಿದ್ದು ಏಕೆ ?

41. ಭರತೇಶನು ಶೋಭಿಸಿದ ಪರಿಯನ್ನು ರತ್ನಾಕರವರ್ಣಿಯು ಹೇಗೆ ವರ್ಣಿಸಿದ್ದಾರೆ ?

ಈ ಕೆಳಗೆ ಕೊಟ್ಟಿರುವ ಸಾಹಿತಿಗಳ ಸ್ಥಳ ಮತ್ತು ಜನ್ಮದಿನಾಂಕವನ್ನು ಬರೆಯಿರಿ : $2 \times 2 = 4$

42. ದತ್ತಾತ್ರೇಯ ರಾಮಚಂದ್ರ ಬೇಂದ್ರೆ

43. ವಿನಾಯಕ ಕೃಷ್ಣ ಗೋಕಾಕ

44. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : $1 \times 2 = 2$

ಪಂಪ ಮಹಾಚಲ ಜೋಡಿ ಶಿಖರಗಳು

ಧುಮ್ಮಿಕ್ಕುವ ಹರಿಹರನ ಝರಿ.

**ಅಥವಾ**

ಕಾಲನ ದೂತರ ಕಾಲ್ಪಿಡಿದಳೆದಾಗ

ಸುಳ್ಳು ಸಂಸಾರದ ಸುಳಿಗೆ ಸಿಕ್ಕಲು ಬೇಡಿ.

ಈ ಕೆಳಗಿನ ಹೇಳಿಕೆಗಳನ್ನು ಸಂದರ್ಭ ಸಹಿತ ವಿವರಿಸಿ : $4 \times 3 = 12$

45. ''ಎಲೆ ಸೂರ್ಯ, ಎಲ್ಲಿದ್ದೀಯೆ, ಬೆಳಕು ಬೇಕು ನನಗೆ''

46. ''ಉಪಾಯವಿಲ್ದೆ ಇದ್ರೆ ಅಪಾಯವೆ''

47. ''ನಿನ್ನ ತವರೂರ ನಾನೇನು ಬಲ್ಲೆನು''

48. ''ಮಾರುದ್ದ ನುಡಿವುದ ಕಂಡು ನಾ ಬೆರಗಾದೆನಯ್ಯ''

49. ಈ ಕೆಳಗಿನವುಗಳಲ್ಲಿ ಯಾವುದಾದರೂ **ಒಂದು** ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ : 1 × 3 = 3

— ಆಳಾಗಬಲ್ಲವನು ಅರಸಾಗಬಲ್ಲ

— ತುಂಬಿದ ಕೊಡ ತುಳುಕುವುದಿಲ್ಲ

— ಬೆಳ್ಳಗಿರುವುದೆಲ್ಲಾ ಹಾಲಲ್ಲ

50. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $2 \times 4 = 8$

— ರಾಮಬಾಡ ಪ್ರದೇಶದ ಕಿರುದಾರಿಯನ್ನು 'ಮಿನಿ ವಿಶ್ವ'ವೆಂದು ಕರೆದುದು ಏಕೆ ? ವಿವರಿಸಿ.

— ನೀರಿಂಗಿಸಲು ಹಣದ ಖರ್ಚೇ ಇಲ್ಲ, ಏಕೆ ? ವಿವರಿಸಿ.

— ತಗಡೂರು ಖಾದಿ ಕೇಂದ್ರ ಹೇಗೆ ಯಶಸ್ವಿಯಾಯಿತು ? ತಿಳಿಸಿ.

51.

52. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಒಂದನ್ನು** ಕುರಿತು ಐದಾರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1 × 4 = 4

— ಶಾಂತಾದೇವಿಯವರು ಧ್ಯಾನದ ಮಹತ್ವವನ್ನು ಹೇಗೆ ನಿರೂಪಿಸಿದ್ದಾರೆ ?

— 'ಮಾನವ ಜನ್ಮ ದೊಡ್ಡದು' ಈ ಕೀರ್ತನೆಯ ಭಾವವನ್ನು ಸಂಗ್ರಹವಾಗಿ ಬರೆಯಿರಿ.

53. ಬೆಂಗಳೂರಿನ ಸದಾಶಿವನಗರ ಬಡಾವಣೆಯ ಖಾಸಗಿ ಪ್ರೌಢಶಾಲೆಯ ಹತ್ತನೇ ತರಗತಿ 'ಎ' ವಿಭಾಗದಲ್ಲಿ ಓದುತ್ತಿರುವ ರಾಕೇಶ್ / ರಶ್ಮಿ ಎಂದು ಭಾವಿಸಿ, ಸೂಕ್ತ ಕಾರಣ ನೀಡಿ ಮೂರು ದಿನಗಳ ರಜೆ ಕೋರಿ ಮುಖ್ಯೋಪಾಧ್ಯಾಯರಿಗೆ ಒಂದು ಪತ್ರ ಬರೆಯಿರಿ. $1 \times 5 = 5$

**ಅಥವಾ**

ಬೆಂಗಳೂರಿನ ರಾಜಾಜಿನಗರ ಬಡಾವಣೆಯ ಮುರುಘೇಂದ್ರ ಪ್ರೌಢಶಾಲೆಯ ಹತ್ತನೇ ತರಗತಿಯಲ್ಲಿ ಓದುತ್ತಿರುವ ಗುರುಪಾದ / ಗೌರಿ ಎಂದು ಭಾವಿಸಿ, ಶಾಲಾ ಶೈಕ್ಷಣಿಕ ಪ್ರವಾಸದಲ್ಲಿ ಭಾಗವಹಿಸಬೇಕಾಗಿರುವುದರಿಂದ 800 ರೂ.ಗಳನ್ನು ಕಳುಹಿಸಿ ಕೊಡಬೇಕೆಂದು ಕೋರಿ, ನೆಲಮಂಗಲದ ಪ್ರಕಾಶನಗರದ ನಿವಾಸಿಯಾದ ನಿಮ್ಮ ತಂದೆ ರಾಮನಾಥ ಅವರಿಗೆ ಒಂದು ಪತ್ರ ಬರೆಯಿರಿ.

54. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ **ಒಂದನ್ನು** ಕುರಿತು 15 ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : $1 \times 5 = 5$

— ದೂರದರ್ಶನ - ಉಪಯೋಗಗಳು
— ವಿದ್ಯಾರ್ಥಿ ಜೀವನದಲ್ಲಿ ಕ್ರೀಡೆಗಳ ಪಾತ್ರ
— ಜಲ ಸಂರಕ್ಷಣೆ